**ದಿನಾಂಕಃ 29.07.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ– ಶ್ರೀ. ಜಿ.ಆರ್.ಎಸ್. 2 ನೇ ಪ್ರತಿವಾದಿಯ ಪರ ವಕೀಲರಿಂದಃ–**

ಸರ್ಕಾರವು ಸರ್ವೆ ನಂ.198 ರ ಪೂರ್ವ ದಿಕ್ಕಿನ 1 ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಂಡಿದೆ. ಆ ಜಮೀನನ್ನು ಯಾವ ಉದ್ದೇಶಕ್ಕಾಗಿ ಸ್ವಾಧೀನ ಪಡಿಸಿಕೊಳ್ಳಾಗಿದೆ ಎಂದು ನನಗೆ ಗೊತ್ತಿಲ್ಲ. ಆ ಸ್ವಾಧೀನದ ಕುರಿತು ಅಧಿಸೂಚನೆ ಆಗಿರುವ ಬಗ್ಗೆ ನನಗೆ ಗೊತ್ತಿಲ್ಲ. ಆ ಜಮೀನಿನ ಸ್ವಾಧೀನದಲ್ಲಿ ಈಗ ಯಾರೂ ಇರುವುದಿಲ್ಲ. ಆ ಜಮೀನು ಯಾರ ಮಾಲೀಕತ್ವದಲ್ಲಿದ್ದಾಗ ಅದನ್ನು ಸ್ವಾಧೀನ ಪಡಿಸಿಕೊಳ್ಳಲಾಯಿತು ಎಂದರೆ ಅದನ್ನು ಕೊನೆಯದಾಗಿ ಖರೀದಿಸಿದವರ ಮಾಲೀಕತ್ವದಿಂದ ಸ್ವಾಧೀನ ಪಡಿಸಿಕೊಳ್ಳಲಾಯಿತು, ಅವರ ಹೆಸರು ನನಗೆ ಗೊತ್ತಿಲ್ಲ. ಆ ಸ್ವಾಧೀನವಾದ ನಂತರ ಆಗಿರುವ ಕಂದಾಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

ಸರ್ವೆ ನಂ.198 ರ ಎಲ್ಲಾ ಪೋಡಿಗಳ ಪಹಣಿ ಪತ್ರಿಕೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಆ ಕುರಿತು ಕೇವಲ ಕೈ ಬರಹ ಪಹಣಿ ಪತ್ರಿಕೆಗಳನ್ನು ಮಾತ್ರ ಹಾಜರುಪಡಿಸಿದ್ದು, ಗಣಕೀಕೃತ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಅವುಗಳನ್ನು ಹಾಜರುಪಡಿಸಲು ನನಗೆ ತೊಂದರೆಯಿಲ್ಲ.

ನನ್ನ ಸರ್ವೆ ನಂ.198 ರಲ್ಲಿ ನನ್ನ ಪೂರ್ವಜರು ಈರಶೆಟ್ಟಿ ಎನ್ನುವವರಿಗೆ 30 ಗುಂಟೆ ಜಮೀನನ್ನು ಮಾರಾಟ ಮಾಡಿದ್ದಾರೆ ಎಂದರೆ ದಾವಾಸ್ತಿಯ ಸರ್ವೆ ನಂಬರ್‌ನಲ್ಲಿ ಮಾರಾಟ ಮಾಡಿರುವುದಿಲ್ಲ. ಹಾಗಾದರೆ, ಬೇರೆ ಯಾವ ಸರ್ವೆ ನಂಬರ್‌ನಲ್ಲಿ ಆ ಆಸ್ತಿಯನ್ನು ಮಾರಾಟ ಮಾಡಿದ್ಧಾರೆ ಎಂದರೆ ದಾಖಲೆಗಳನ್ನು ನೋಡಿ ಹೇಳಬೇಕು. ಆ ಆಸ್ತಿಯು ಮತ್ತು ಈ ಮೇಲೆ ಹೇಳಿದ ಸ್ವಾಧಿನವಾದ 1 ಎಕರೆ ಆಸ್ತಿಯು ಸರ್ವೆ ನಂ.198 ರಲ್ಲಿ ಬರುತ್ತವೆ ಎಂದರೆ ಆ ಸರ್ವೆ ನಂಬರ್‌ನ ಬೇರೆ ಬೇರೆ ಪೋಡಿಗಳಲ್ಲಿ ಬರುತ್ತವೆ, ಆ ಸರ್ವೆ ನಂಬರ್‌ನಲ್ಲಿ ಒಟ್ಟು 2 ಎಕರೆ 20 ಗುಂಟೆ ಜಮೀನು ಇದೆ.

ಸದರಿ 2 ಎಕರೆ 20 ಗುಂಟೆ ಜಮೀನಿನಲ್ಲಿ ಈ ಮೇಲೆ ಹೇಳಿದ ಈರಶೆಟ್ಟರವರಿಗೆ 30 ಗುಂಟೆ ಜಮೀನನ್ನು ಮಾರಾಟ ಮಾಡಲಾಗಿದೆ ಎಂದರೆ ಸರಿ, ಆ ಜಮೀನು ಸರ್ವೆ ನಂ.198/1 ಸಿ ರಲ್ಲಿ ಬರುತ್ತದೆ. ಅದು ಮಾರಾಟವಾದ ನಂತರ ಆ ಸರ್ವೆ ನಂಬರ್ ಬಂದಿದೆ ಎಂದರೆ ನನಗೆ ಮಾಹಿತಿಯಿಲ್ಲ. ಆ ಜಮೀನಿನ ಸ್ವಾಧೀನಕ್ಕೆ ನನ್ನ ತಕರಾರು ಇಲ್ಲ ಎಂದರೆ ಸರಿ, ಸರ್ವೆ ನಂ.198/1 ಸಿ ನಲ್ಲಿ ಉಳಿದಿರುವ ಜಮೀನು ಮಾತ್ರ ನಮಗೆ ಬರಬೇಕು. ಅದರಲ್ಲಿ ಎಷ್ಟು ಮತ್ತು ಯಾವ ದಿಕ್ಕಿಗೆ ಜಮೀನು ಉಳಿದಿದೆ ಎಂದರೆ ದಾಖಲೆ ನೋಡಿ ಹೇಳಬೇಕು. ನಾವು ಆ ಜಮೀನನ್ನು ಉಳುಮೆ ಮಾಡಿಲ್ಲ ಮತ್ತು ಅದರ ಸ್ವಾಧೀನದಲ್ಲಿ ಇಲ್ಲ.

2 ನೇ ಪ್ರತಿವಾದಿಗೆ ತೊಂದರೆ ಕೊಡುವ ಸಲುವಾಗಿ ಅವರ ವಿರುದ್ಧ ಸುಳ್ಳು ದಾವಾ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಜಮೀನಿನಲ್ಲಿ ಅವರ ಒಂದು ಗುಂಟೆ ಜಮೀನು ಇರುವುದರಿಂದ ಅವರನ್ನು ಕೂಡ ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಲಾಗಿದೆ.

ನಿಪಿ.8 ನ್ನು ಯಾರು ಮತ್ತು ಯಾವಾಗ ಸಿದ್ಧಪಡಿಸಿದ್ದಾರೆಂದು ನನ್ನ ವಕೀಲರನ್ನು ಕೇಳಿ ಹೇಳಬೇಕು. ಈ ಪ್ರಕರಣಕ್ಕಾಗಿ ಅದನ್ನು ಸೃಷ್ಠಿಸಲಾಗಿದೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯ ಆಸ್ತಿ ಮತ್ತು ನಮಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿ.

**ಮರುವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)

**ಓ ಹೇ ಕೇ ಸರಿ ಇದೆ**

**ಹಿರಿಯ ದಿವಾಣಿ ನ್ಯಾಯಾಧೀಶರು,**

**ತಿ.ನರಸೀಪುರ.**